ತಡೆದಿದ್ದಾರೆ. ಆದರೆ ಆಗಿಹೋಗಿರುವ ಬಾಲ್ಯವಿವಾಹಗಳ ಬಗ್ಗೆ ಅಷ್ಟು ನಿಖರವಾದ ಮಾಹಿತಿ ಯಾರಲ್ಲಿಯೂ ಇಲ್ಲ' ಎನ್ನುತ್ತಾರೆ ತಂಗಪೆರುಮಾಳ್.

ದೇವದಾಸಿ ಪದ್ಧತಿಗೆ ಮಕ್ಕಳನ್ನು ದೂಡುವುದನ್ನು ತಪ್ಪಿಸಲು ಕೆಲಸ ಮಾಡುತ್ತಿರುವವರು ಬೆಳಗಾವಿಯ ಶೋಭಾ ಗಸ್ತಿ. 'ಈ ಹೊಸ ರೋಗದ ಹೆಸರಿನಲ್ಲಿ ಜನ ಹರಕೆಗಳನ್ನು ಹೊರುತ್ತಿರುವುದು, ಮತ್ತು ಯಾರೂ ಹೇಳುವವರು ಕೇಳುವವರು ಇಲ್ಲ ಅಂತ ನಿಷೇಧವಿದ್ದರೂ ಹೆಣ್ಣುಮಕ್ಕಳನ್ನು ದೇವದಾಸಿಯರನ್ನಾಗಿ ಅರ್ಪಿಸುವ ಭಯ ಕಾಡುತ್ತಾ ಇದೆ. ಶಾಲೆಯಿಲ್ಲ, ಆದಾಯವಿಲ್ಲ ಎನ್ನುವುದು ಈ ಸಮುದಾಯಗಳನ್ನು ಹತಾಶೆಗೆ ತಳ್ಳಿಬಿಟ್ಟಿದೆ. ನಾವು ಎಚ್ಚರಿಕೆಯಿಂದ ಇದ್ದು ಯಾವುದೇ ಹೆಣ್ಣುಮಗುವನ್ನೂ ದೇವದಾಸಿಯನ್ನಾಗಿಸದಂತೆ ಕಾಯಬೇಕಿದೆ' ಎಂದವರು ಹೇಳುತ್ತಾರೆ.

ನಮ್ಮ ದೇಶದಲ್ಲಿ ಕಳೆದೆರಡು ಮೂರು ದಶಕಗಳಲ್ಲಿ ಭಾರೀ ಪ್ರಮಾಣದ ಭೂಕಂಪಗಳಾದಾಗ ಮಕ್ಕಳ ಪಾಲನಾ ನಿಲಯಗಳನ್ನು ನಡೆಸುವವರು ಬಾಧಿತ ಪ್ರದೇಶಗಳಿಗೆ ಹೋಗಿ ದಿಕ್ಕಿಲ್ಲದ ಮಕ್ಕಳನ್ನು ಕರೆತಂದು ತಮ್ಮ ನಿಲಯಗಳಲ್ಲಿ ಇರಿಸಿಕೊಳ್ಳುತ್ತಿದ್ದರು. ಇದು ಸದುದ್ದೇಶದ ಕ್ರಮಗಳೆಂದೇ ಹೇಳಿದರೂ, ಆ ಮಕ್ಕಳಿಗೆ ತಮ್ಮ ಸ್ವಾಭಾವಿಕ ಪರಿಸರವನ್ನು ತಪ್ಪಿಸಿದ್ದು ಮತ್ತು ತಮ್ಮ ಸಂಬಂಧಿಗಳೊಡನಿದ್ದ ಸಂಪರ್ಕವನ್ನು ಕಿತ್ತುಕೊಂಡದ್ದು ಮಕ್ಕಳ ಹಕ್ಕುಗಳ ಉಲ್ಲಂಘನೆಯೇ ಆಗಿದೆ. (ಸದ್ಯದ ಮಕ್ಕಳ ಹಕ್ಕುಗಳ ಪರಿಭಾಷೆಯಲ್ಲಿ ಅನಾಥಾಲಯ ಎಂಬ ಪದದ ಬಳಕೆ ಇಲ್ಲ. ಬದಲಿಗೆ ಮಕ್ಕಳ ಪಾಲನಾ ನಿಲಯ / ಗೃಹ ಎಂದು ಬಳಸಬೇಕಿದೆ)

ಈಗ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015 ಮತ್ತು ಮಾನವ ಕಳ್ಳಸಾಗಣೆ ನಿಷೇಧ ಕಾಯಿದೆ 1956 ಜಾರಿಯಲ್ಲಿದ್ದು ಯಾವುದೇ ಮಗುವನ್ನು ತಮ್ಮ

> **ಕಳೆದ ಸಾಲಿನಲ್ಲಿ ಚೈಲ್ಡ್‌ಲೈನ್, ಮಕ್ಕಳ ಸಂರಕ್ಷಣಾ ಘಟಕಗಳು ಹಾಗೂ ಸ್ವಯಂಸೇವಾ ಸಂಘಟನೆಗಳು ಒಂದಾಗಿ ನೂರಾರು ಬಾಲ್ಯವಿವಾಹಗಳನ್ನು ತಡೆದಿದ್ದಾರೆ. ಆದರೆ ಆಗಿಹೋಗಿರುವ ಬಾಲ್ಯವಿವಾಹಗಳ ಬಗ್ಗೆ ಅಷ್ಟು ನಿಖರವಾದ ಮಾಹಿತಿ ಯಾರಲ್ಲಿಯೂ ಇಲ್ಲ**
>
> **-ತಂಗ ಪೆರುಮಾಳ್ ಪೋನ್‌ಪಾಂಡಿ,**
> ಟೆರೆಡೆಸ್ ಹೋಮ್ಸ್ ನೆದರ್‌ಲೆಂಡ್ಸ್



ಮೂಲ ನೆಲೆಗಳಿಂದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳ ಒಪ್ಪಿಗೆಯಿಲ್ಲದೆ ಹೊರಗೆ ಒಯ್ಯುವುದು 'ಮಕ್ಕಳು ಮತ್ತು ಮಾನವ ಕಳ್ಳ ಸಾಗಣೆ' ಅಪರಾಧದ ವ್ಯಾಪ್ತಿಗೆ ಬರುತ್ತದೆ.

ಕೋವಿಡ್‌ನಿಂದಾಗಿ ಯಾವುದೇ ಮಗುವಿಗೆ ಎಂತಹುದೇ ತೊಂದರೆಯಾದಲ್ಲಿ ಸಾರ್ವಜನಿಕರು ಚೈಲ್ಡ್‌ಲೈನ್ 1098ಕ್ಕೆ ಕರೆ ಮಾಡಿ ಮಾಹಿತಿ ನೀಡಲು ಸರ್ಕಾರ ಪ್ರಚುರಪಡಿಸುತ್ತಿದೆ. ಚೈಲ್ಡ್‌ಲೈನ್ ಭಾರತ ಸರ್ಕಾರದ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆಯ ಭಾಗವಾಗಿದ್ದು ಇಡೀ ದೇಶದ ಎಲ್ಲ ಜಿಲ್ಲೆಗಳಲ್ಲಿ ತನ್ನ ಕಾರ್ಯಜಾಲವನ್ನು ಹೊಂದಿದೆ. ಸರ್ಕಾರ ಮತ್ತು ಸ್ವಯಂಸೇವಾ ಸಂಘಟನೆಗಳು ಸೇರಿ ಮಕ್ಕಳ ರಕ್ಷಣೆಯ ಕೆಲಸ ನಡೆಸುವ ಈ ವ್ಯವಸ್ಥೆಗೆ ವಿಶ್ವಸಂಸ್ಥೆಯೂ ಪ್ರಶಂಸೆ ವ್ಯಕ್ತಪಡಿಸಿದೆ.

## ದತ್ತು ಕೊಡಬಹುದೇ?

ಕೋವಿಡ್‌ನಿಂದ ಅನಾಥರಾದ ಮಕ್ಕಳನ್ನು ದತ್ತು ಕೊಡುತ್ತೇವೆ ಎಂದು ಯಾರಾದರೂ ಈಗ ಹೇಳಿದರೆ ಅದು ಮಕ್ಕಳನ್ನು ಪರಭಾರೆ ಮಾಡುವ/ ಮಾರುವ ಅಪರಾಧವೆನಿಸುತ್ತದೆ; ಅಂತಹ ಮಕ್ಕಳನ್ನು ದತ್ತು ಪಡೆದವರನ್ನು ಸಹ ಮಕ್ಕಳನ್ನು ಅನೈತಿಕವಾಗಿ, ಕಾನೂನಿಗೆ ವಿರುದ್ಧವಾಗಿ ಪಡೆದ ಅಪರಾಧ ಮಾಡಿದವರೆಂದು ಅವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತದೆ. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ಕೊಡದೆ ಮಕ್ಕಳನ್ನು ತಂದು ಇಟ್ಟುಕೊಳ್ಳುವ ಮಕ್ಕಳ ಪಾಲನಾ ನಿಲಯಗಳೂ ಇಂತಹದೇ ಅಪರಾಧದ ವ್ಯಾಪ್ತಿಗೆ ಬರುತ್ತವೆ.

ಕೋವಿಡ್ ಅನಾಥರನ್ನು ದತ್ತು ಕೊಡುತ್ತೇವೆ ಎಂದು ಮಾಹಿತಿ ಹೊರಡಿಸಿದವರು, ಜಾಹೀರಾತು ಕೊಟ್ಟವರನ್ನು ದೆಹಲಿ, ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರದ ಪೊಲೀಸ್ ವ್ಯವಸ್ಥೆ ಪತ್ತೆ ಮಾಡಲು ಹೊರಟಾಗ ಕಂಡುಬಂದದ್ದು ಅವುಗಳಲ್ಲಿ ಹೆಚ್ಚು ಭಾಗ ಸುಳ್ಳು ಸುದ್ದಿಗಳೇ ಎಂಬುದು. ಪ್ರಾಯಶಃ ಇಂತಹ ಪ್ರಕಟಣೆಗಳು ಜನರನ್ನು ವಂಚಿಸಿ ಹಣಕಾಸು ದೋಚುವ ಹೊಸ ಪರಿಯ ಕುಯುಕ್ತಿಗಳು ಇರಬಹುದು.

## ನಾಳೆಗಳು ಹೇಗೆ?

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ರಾಘವೇಂದ್ರ ಅವರು ಹೇಳುವಂತೆ, ಕೊರೊನಾ ಕೇವಲ ಒಂದು ಸೋಂಕು ಅಥವಾ ರೋಗವಾಗಿ ಉಳಿದಿಲ್ಲ. ಮಕ್ಕಳಿಗೆ ಇದ್ದ ಸಾಮಾಜಿಕ ರಕ್ಷಣೆ, ಪೋಷಣೆಯ ಚೌಕಟ್ಟನ್ನೇ ಇದು ಅಲುಗಾಡಿಸುತ್ತಿದೆ. 'ಅನೇಕ ಸಮುದಾಯಗಳಲ್ಲಿ ಮಕ್ಕಳು ಮನೆಯಲ್ಲಿರುವುದನ್ನೇ ನೆಪವಾಗಿಟ್ಟುಕೊಂಡು ವಿವಿಧ ಕೆಲಸಗಳಿಗೆ ಒಯ್ಯುತ್ತಿದ್ದಾರೆ. ಮಕ್ಕಳ ಕೂಲಿ ಅನೇಕ ಕುಟುಂಬಗಳಿಗೆ ಬಹಳ ಮುಖ್ಯವಾಗಿಬಿಟ್ಟಿದೆ. ನನಗಿರುವ ದೊಡ್ಡ ಭಯ, ಮಕ್ಕಳು ಕೆಲಸ ಮಾಡಲಿ ಬಿಡಿ ಎನ್ನುವ ಮನೋಭಾವ ಸಮುದಾಯಗಳಲ್ಲಿ ಸಹಾನುಭೂತಿ ಮತ್ತು ಅನಿವಾರ್ಯ ಎನ್ನುವ ಧೋರಣೆಯಲ್ಲಿ ಬೆರೆತು ಹೋದರೆ ನಾವು ಮತ್ತೆ ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣೆ, ಶಿಕ್ಷಣ ಎನ್ನುವುದನ್ನು ಜಾರಿ ಮಾಡಲು ಇನ್ನೊಂದೆರಡು ದಶಕಗಳ ಆಂದೋಲನ ಮಾಡಬೇಕಾದೀತು' ಎಂದು ಭವಿಷ್ಯದಲ್ಲಿ ಈ ಸಮಸ್ಯೆ ಇನ್ನಷ್ಟು ಕಗ್ಗಂಟಾಗುವ ಕುರಿತು ರಾಘವೇಂದ್ರ ಎಚ್ಚರಿಸುತ್ತಾರೆ.

ಇನ್ನು ಎರಡು ಮೂರು ತಿಂಗಳುಗಳಲ್ಲಿ ಕೋವಿಡ್‌ನ ತೀವ್ರತೆ ಕಡಿಮೆಯಾಗಬಹುದು. ಆದರೆ ಹಿಂದಿನ ದುರಂತಗಳಿಂದ ಕಂಡುಬಂದಿರುವುದು, ಅವುಗಳ ಕರಾಳ ನೆರಳು ದೀರ್ಘಕಾಲ ಸಮುದಾಯಗಳನ್ನು ಕಾಡುವ ವಿಚಾರ. ಉದ್ಯೋಗ ಕಳೆದುಕೊಂಡವರು, ಸಂಪಾದನೆಯಿಲ್ಲದವರು, ತಮ್ಮ ಹತ್ತಿರದವರನ್ನು

